# ಜೇಡರ ಬಲೆಯಲ್ಲಿ ಮುತ್ತಿನ ಸರಗಳು!

ಚಿತ್ರ ಬರಹ:
ಗಣಪತಿ ಬಾಳೆಗದ್ದೆ





ರಾತ್ರಿಯಿಡೀ ಮಂಜು ಸುರಿದಿತ್ತು. ಗಿಡ, ಮರ, ಬಳ್ಳಿಗಳ ಮೇಲೆಲ್ಲ ಕಣ ಕಣವಾಗಿ ಉದುರಿದ ಮಂಜು. ಸೂರ್ಯೋದಯವಾದರೂ ಬಿಸಿಲಿನ ಸುಳಿವಿರಲಿಲ್ಲ. ಮೈ ನಡುಗಿಸುವಷ್ಟು ಚಳಿ. ದಟ್ಟ ಮಂಜು..

ದೃಷ್ಟಿ ಹಾಯಿಸಿದ ಕಡೆಯೆಲ್ಲ ಬರೀ ಇಬ್ಬನಿ! ಹಿಮಾಲಯವೇ ಕರಗಿ ಖಾಲಿಯಾಗಿ ಇಲ್ಲಿ ಉದುರಿದೆಯೇನೋ ಎಂಬಂತೆ! ಸಣ್ಣದು, ದೊಡ್ಡದು, ಮಧ್ಯಮ.... ನೂರಾರು ತರಹ! ಮೆರವಣಿಗೆ ಹೊರಟ ದಿಬ್ಬಣಿಗರ ಹಾಗೆ ಇಬ್ಬನಿಯ ಸಾಲು.

ಅಲ್ಲಲ್ಲಿ ಜೇಡರ ಬಲೆ ತೂಗುತ್ತಿತ್ತು. ಅವುಗಳ ಮೇಲೂ ಇಬ್ಬನಿ. ಬೆಳಗಾಗುವುದರೊಳಗೆ ಯಾರೋ ಮಾಯಾವಿಯ ಕೈ ಚಳಕಕ್ಕೆ ಸಿಕ್ಕು ತಯಾರಾದ ಮುತ್ತುಗಳು! ಮೆಲ್ಲಗೆ ಇಣುಕಿದ ಎಳೆಬಿಸಿಲಿನಲ್ಲಿ ಹರಳುಗಳ ಹಾಗೆ ಹೊಳೆಯುತ್ತಿದ್ದವು!

ರಾತ್ರಿ ಮೈ ಮರೆತು ಬಿಟ್ಟು ಹೋದ ಬೆಳದಿಂಗಳ ಸರಗಳೋ..!? ಚಂದ್ರಮನೇ ಎಲ್ಲಾದರೂ ತನ್ನ ದೇಹದ ಚೂರುಗಳನ್ನು ಉದುರಿಸಿಹೋದನೇ..? ನೋಡ ನೋಡುತ್ತಿದ್ದಂತೆಯೇ ಬಿಸಿಲು ಮನೆಮಾಡಿತು. ಸರಗಳೆಲ್ಲ ಕರಗೇಹೋದವು.

